## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ**182/2016**

ಸಿ.ಡಬ್ಲ್ಯೂ-20 ಪಿ.ಡಬ್ಲ್ಯೂ-10

| | | |
|---|---|---|
| ಹೆಸರು | ಃ | ಸುನೀಲ |
| ತಂದೆಃಗಂಡ | ಃ | ರಮೇಶ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | : | ಡೆಪ್ಯೂಟಿ ಮ್ಯಾನೇಜರ ಎಸ.ಬಿ.ಐ. |
| ವಾಸಸ್ಥಳ | ಃ | ಬೀದರ |

ದಿನಾಂಕಃ05.02.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು 2010 ರಿಂದ 2013 ರ ವರೆಗೆ ಕಡಗಂಚಿಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ.

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-1 ರಿಂದ 3, 18, 19, 21, 23, 27 ಪರಿಚಯ ಇರುತ್ತಾರೆ. ಉಳಿದವರ ಪರಿಚಯ ಇರುವುದಿಲ್ಲ. ಘಟನಸೆ ನಡೆದ ಮರುದಿನ ನಾನು ಬ್ಯಾಂಕಿಗೆ ಹೋದಾಗ ಬಾಗಿಲು ಒಡೆದು ದರೋಡೆ ಮಾಡಿರುತ್ತಾರೆ ಎಂದು ಗೊತ್ತಾಗಿರುತ್ತದೆ. ನಾನು ಎಲ್ಲ ಸಿಬ್ಬಂದಿಗಳೊಂದಿಗೆ ಇದ್ದಾಗ ನನಗೆ ಗೊತ್ತಾಗಿರುತ್ತದೆ. ಪೋಲಿಸರು ಬಂದು ತನಿಖೆ ಮಾಡಿರುತ್ತಾರ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.13.10.2013 ರಂದು ಬೆಳಗ್ಗೆ 9.50 ಗಂಟೆಗೆ ನಾನು ಕರ್ತವ್ಯಕ್ಕೆ ಹೋಗಿ ನೋಡಿದಾಗ ಬ್ಯಾಂಕಿನ ಗೋಡೆ ಒಡೆದಿರುವುದು ಗೊತ್ತಾಗಿರುತ್ತದೆ ಎಂದರೆ ಸರಿ. ಸಂಶಯ ಬಂದು ಚಾಸಾ-1 ರವರು ಒಳಗೆ ಹೋಗಿ ನೋಡಿ ತಿಳಿಸಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ನರೋಣಾ ಪೋಲಿಸ ಠಾಣೆಗೆ ಹೋಗಿ ವಿಷಯ ತಿಳಿಸಿರುತ್ತಾರೆ ಎಂದರೆ ಸರಿ. ನಮ್ಮ ಬ್ಯಾಂಕಿನ ಒಟ್ಟು ರೂ.46,40,392/- ಗಳು ಕಳ್ಳತನವಾಗಿದ್ದವು ಎಂದರೆ ಸರಿ. 4500/- ಗ್ರಾಂ ಬಂಗಾರ ಕಳ್ಳತನವಾಗಿತ್ತು ಎಂದರೆ ಸರಿ. ದಘಟನೆ ದಿ.12.10.2013 ರಂದು ಮದ್ಯರಾತ್ರಿ ನಡೆದಿರುತ್ತದೆ ಎಂದರೆ ಸರಿ. ಒಟ್ಟು ರೂ.1,78,40,392/- ಕಳ್ಳತನವಾಗಿತ್ತು ಎಂದರೆ ಸರಿ. ದಿ.10.10.2013 ರಂದುಜ ಸಿಪಿಐರವರು ನನಗೆ ನಮ್ಮ ಸಿಬ್ಬಂದಿಗಳಿಗೆ ಪೋಲಿಸ ಠಾಣೆಗೆ ಕರೆಯಿಸಿದ್ದರು ಎಂದರೆ ಸರಿ.ಿ ಪಿಐರವರು ಬಂಗಾರ ಕರಗಿಸಿದ ಒಂದು ಗಟ್ಟಿ ಹಾಗೂ ಒಂದು ಟಾಟಾ ಸುಮೊ ತೋರಿಸಿರುತ್ತಾರೆ ಎಂದರೆ ಸಾಕ್ಷಿ ನಾನು ಆ ದಿನ ಹೋಗಿರಲಿಲ್ಲ ನಮ್ಮ ಮ್ಯಾನೇಜರ ಹೋಗಿರುತ್ತಾರೆ ಎಂದು ಹೇಳುತ್ತಾರೆ. ಆರೋಪಿತರು ಕಳ್ಳತನ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಿ.14.11.2013 ರಂದು ನನಗೆ ನಮ್ಮ ಸಿಬ್ಬಂದಿಗಳಿಗೆ ಸಿಪಿಐರವರು ಎಂ.ಬಿ.ನಗರ ಪೋಲಿಸ ಠಾಣೆಗೆ ಕರೆಯಿಸಿದ್ದರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಒಂದ ಇಚರ ವಾಹನ ಜಪ್ತಿಪಡಿಸಿಕೊಂಡಿರುತ್ತಾರೆ ಅದನ್ನುನೋಡಿ ನಾನು

ಗುರುತಿಸಿರುತ್ತೇನೆಸಿ ಎಂದರೆ ಸರಿಯಲ್ಲ. ಆರೋಪಿತರು ಕಳ್ಳತನ ಮಾಡಿರುತ್ತಾರೆ ಎಂದು ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಎದುರು ಹೇಳಿಕೆ ಹಾಗೂ ಪೂರವಣಿ ಹೇಳಿಕೆ ಹಾಗೂ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಐ.ಎಸ್. ಮತ್ತು ಬಿ.ಜಿ.ಬಿ. ವಕೀಲರಿಂದಃ**

ದಿ.12.10.2012 ರಂದು ನಮ್ಮ ಬ್ಯಾಂಕಿನಲ್ಲಿ ಕಳ್ಳತನ ಆಗಿರುತ್ತದೆ ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಒಳಗೆ ಹೋಗಲು ಪ್ರಯತ್ನ ಪಟ್ಟಿರುವುದಿಲ್ಲ. ನಾನು ಒಳಗೆ ಹೋಗಿದಾಗ ಲೈಟ ಕ್ಯಾಮರಾಗಳು ಒಡೆದಿದ್ದವು. ನಾನು ನಮ್ಮ ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ಗುರುತಿಸಿರುವುದಿಲ್ಲ. ನಾನುಹೇಳಿದ ಮೊತ್ತ ಒಂದೇ ದಿನ ಕೂಡಿದ ಮೊತ್ತ ಆಗಿರುವುದಿಲ್ಲ ಮೊದಲಿನಿಂದ ಇರುವ ಹಣ ಇರುತ್ತದೆ. ನಮ್ಮ ಬ್ಯಾಂಕಿನಲ್ಲಿ ಒಟ್ಟು ಎಷ್ಟು ಮೊತ್ತದ ಹಣ ಇಡಬಹುದು ಎಂದು ನನಗೆ ಗೊತ್ತಿಲ್ಲ. ಆರೋಪಿತರಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯಹುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು,
ಆಳಂದ